( )

SCCH – 01
MVC No.2118/2023
RW1

**<u>ದಿನಾಂಕಃ 19.11.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಪಾಟೀ ಸವಾಲು: 3 ನೇ ಎದುರುದಾರರ ಪರ ವಕೀಲರಾದ ಶ್ರೀ.ಕೆ.ಎಂ.ಆರ್. ರವರಿಂದಃ</u>**

ದಿನಾಂಕ 07.01.2023 ರಂದು ಗೇಟ್ ಪಾಸ್/ಡೆಲಿವರಿ ನೋಟ್ ಕೊಟ್ಟು ವಾಹನವನ್ನು ನಮ್ಮ ಬಿಮಲ್ ಮೋಟಾರ್ಸ್ ಸಂಸ್ಥೆಯಿಂದ ಹೊರಗಡೆಗೆ ಕಳುಹಿಸಲಾಗಿದೆ. ಸಾಮಾನ್ಯವಾಗಿ ಒಂದು ವಾಹನವನ್ನು ನಮ್ಮ ಶೋ-ರೂಮ್‌ನಿಂದ ಹೊರಗಡೆಗೆ ಕೊಡುವಂತಹ ಸಮಯದಲ್ಲಿ ಸದರಿ ವಾಹನಕ್ಕೆ ರಿಜಿಸ್ಟ್ರೇಶನ್ ಮಾಡಿಸಿ ಮತ್ತು ಅದಕ್ಕೆ ವಿಮಾ ಪಾಲಿಸಿಯನ್ನು ಪಡೆದುಕೊಂಡು ನಂತರವೇ ಆ ವಾಹನವನ್ನು ಹೊರಗಡೆಗೆ ಕೊಡುತ್ತೇವೆ ಎಂದರೆ ಸರಿ.

2. ಆ ವಾಹನಕ್ಕೆ ವಿಮೆ ಮಾಡಿಸಬೇಕು ಮತ್ತು ನೋಂದಣಿ ಮಾಡಿಸಬೇಕು ಮತ್ತು ಆ ನಂತರವಷ್ಟೇ ಆ ವಾಹನವನ್ನು ಶೋರೂಮ್‌ನಿಂದ ಹೊರಗಡೆಗೆ ಕಳುಹಿಸಬೇಕು ಎಂದರೆ ಸರಿ.

3. ನಮ್ಮ ಶೋ-ರೂಮ್‌ನಿಂದ ಹೊಸ ವಾಹನವನ್ನು ಖರೀದಿ ಮಾಡಿದ ನಂತರ ಸದರಿ ಮೋಟಾರ್ ಸೈಕಲ್ ಅನ್ನು ಕೊಡುಕೊಂಡಂತಹ ವ್ಯಕ್ತಿಯು ಸದರಿ ವಾಹನಕ್ಕೆ ಯಾವಾಗ ನೋಂದಣಿ ಮಾಡಿಸಿಕೊಂಡಿದ್ದಾರೆ ಮತ್ತು ಯಾವ ದಿನಾಂಕದಂದು ವಿಮಾ ಪಾಲಿಸಿ ಪಡೆದುಕೊಂಡಿರುತ್ತಾರೆ ಎಂಬ ವಿವರಗಳು ನನಗೆ ಗೊತ್ತಿರುವುದಿಲ್ಲ.

SCCH – 01
MVC No.2118/2023
RW1

**ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಾದ ಶ್ರೀ.ಎ.ಎಂ.ಎಲ್. ರವರಿಂದಃ**

ನಾನು ಐಟಿಐವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಈಗ ನಾನು ಬಿಮಲ್ ಮೋಟಾರ್ಸ್ ಎಂಬ ಶೋ-ರೂಮ್‌ನಲ್ಲಿ ಮಾರಾಟ ಅಧಿಕಾರಿ ಆಗಿದ್ದೇನೆ. ನಮ್ಮ ಶೋ-ರೂಮ್‌ಗೆ ಬರುವಂತಹ ಗ್ರಾಹಕರ ಸಮಸ್ಯೆಗಳನ್ನು ಕೇಳುವುದು ಮತ್ತು ಅದಕ್ಕೆ ಸೂಕ್ತವಾದ ಪರಿಹಾರ ತಿಳಿಸುವುದು ನಮ್ಮ ಕೆಲಸ ಆಗಿದೆ. 2014 ನೇ ಇಸವಿ ಅಕ್ಟೋಬರ್ ತಿಂಗಳಿನಿಂದ ನಾನು 2 ನೇ ಎದುರುದಾರರ ಸಂಸ್ಥೆಯಲ್ಲಿ ಕರ್ತವ್ಯ ಮಾಡುತ್ತಾ ಇದ್ದೇನೆ.

2. ನಿ.ಆರ್.1 ಎಂದು ಗುರುತು ಆಗಿರುವ ದಾಖಲೆಯನ್ನು ನಮ್ಮ ಮಾಲೀಕರಾದ ಸುಮಿತ್ ಕುಮಾರ್ ಸರವಗಿ ಅವರು ನೀಡಿದ್ದಾರೆ.

3. ನಮ್ಮ ಶೋ-ರೂಮ್‌ನಿಂದ ಒಂದು ವಾಹನವನ್ನು ಮಾರಾಟ ಮಾಡಿದ ನಂತರ ಆ ಹೊಸ ವಾಹನವನ್ನು ಖರೀದಿದಾರರಿಗೆ ಕೊಡುವುದಕ್ಕಿಂತ ಮೊದಲು ಆ ವಾಹನಕ್ಕೆ ನೋಂದಣಿ ಮಾಡಿಸುತ್ತೇವೆ ಮತ್ತು ಆ ವಾಹನಕ್ಕೆ ವಿಮಾ ಪಾಲಿಸಿಯನ್ನು ಪಡೆಯುತ್ತೇವೆ ಮತ್ತು ಇದೆಲ್ಲಾ ಆದ ನಂತರ ಮಾತ್ರ ಹೊಸ ವಾಹನವನ್ನು ಖರೀದಿದಾರರಿಗೆ ಕೊಡುತ್ತೇವೆ ಎಂದರೆ ಸರಿ.

4. ಹೊಸ ವಾಹನವನ್ನು ಕೊಂಡುಕೊಂಡಂತಹ ವ್ಯಕ್ತಿಯಿಂದ ವಾಹನದ ಮೌಲ್ಯ, ನೋಂದಣಿ ಖರ್ಚು ಮತ್ತು ವಿಮಾ ಪಾಲಿಸಿಯ ಹಣ ಎಲ್ಲವನ್ನೂ ನಾವು ಶೋ-ರೂಮ್‌ನವರು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಆ ರೀತಿ ಹೊಸ ವಾಹನಕ್ಕೆ ವಿಮಾ ಪಾಲಿಸಿ ತೆಗೆದುಕೊಳ್ಳುವುದು ಮತ್ತು ಅದನ್ನು RTO ಕಛೇರಿಯಲ್ಲಿ ನೋಂದಣಿ ಮಾಡಿಸುವುದು ಎಲ್ಲವನ್ನು ನಮ್ಮ ಶೋ-ರೂಮ್ ನವರೇ ಮಾಡುತ್ತಾರೆ.

**5. ಸೂಚನೆ:** 2 ನೇ ಎದುರುದಾರರು ದಿನಾಂಕ 30.10.2023 ರಂದು ಟ್ಯಾಕ್ಸ್ ಇನ್‌ವಾಯ್ಸ್ ಎಂಬ ತಲೆ ಬರಹ ಇರುವ ದಾಖಲೆಯನ್ನೂ ಸಹ ಹಾಜರುಪಡಿಸಿದ್ದಾರೆ, ಆದರೆ ಸದರಿ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಿಕೊಂಡಿರುವುದಿಲ್ಲ. ಈಗ ಅರ್ಜಿದಾರರ ಪರ ವಕೀಲರು ಸದರಿ ಟ್ಯಾಕ್ಸ್ ಇನ್ ವಾಯ್ಸ್ ಅನ್ನು ಈ ಸಾಕ್ಷಿದಾರರಿಗೆ ತೋರಿಸಿ, ನಂತರ "ಈ ದಾಖಲೆಯನ್ನು ನಿಮ್ಮ ಶೋ-ರೂಮ್‌ನಿಂದ 1 ನೇ ಎದುರುದಾರರಾದ ದಾವೂದ್ ಇಬ್ರಾಹಿಂ ಎಂಬುವವರಿಗೆ ನೀಡಲಾಗಿದೆ" ಎಂದು ಪ್ರಶ್ನೆ ಕೇಳಿದ್ದಾರೆ. ಅದಕ್ಕೆ ಸಾಕ್ಷಿಯು "ಹೌದು" ಎಂದು ಒಪ್ಪಿಕೊಂಡಿದ್ದಾರೆ. ಈ ದಾಖಲೆಯನ್ನು ನಿಶಾನೆಯನ್ನಾಗಿ ಗುರುತಿಸಬೇಕು ಎಂಬುದಾಗಿ ಅರ್ಜಿದಾರರ ಪರ ವಕೀಲರು ಪ್ರಾರ್ಥಿಸಿದ್ದಾರೆ. ಆದರೆ, ಈ ದಾಖಲೆಯನ್ನು ಅರ್ಜಿದಾರರು ಹಾಜರುಪಡಿಸಿರುವುದಿಲ್ಲ. ಆದ ಕಾರಣದಿಂದ ಈ ದಾಖಲೆಯನ್ನು ಐಡೆಂಟಿಫಿಕೇಶನ್ ಉದ್ದೇಶಕ್ಕಾಗಿ ಮಾತ್ರ **ನಿ.ಎಸ್.1** ಎಂದು ಗುರುತಿಸಿದೆ.

6. ನಿ.ಎಸ್.1 ದಾಖಲೆಯಲ್ಲಿ ಇರುವ ಮಾಹಿತಿಯ ಪ್ರಕಾರ ದಿನಾಂಕ 09.01.2023 ರಂದು ಆ ಟ್ಯಾಕ್ಸ್ ಇನ್‌ವಾಯ್ಸ್ ಅನ್ನು ನೀಡಲಾಗಿದೆ ಎಂದರೆ ಸರಿ.

7. 1 ನೇ ಎದುರುದಾರರಾದ ದಾವೂದ್ ಇಬ್ರಾಹಿಂ ಅವರು ನಮ್ಮ ಶೋ-ರೂಮ್‌ನಿಂದ ಕೊಂಡುಕೊಂಡಂತಹ ಹೊಸ ದ್ವಿಚಕ್ರ ವಾಹನವನ್ನು RTO ಕಛೇರಿಯಲ್ಲಿ ನೋಂದಣಿ ಮಾಡಿಸಿರುವುದಿಲ್ಲ.

8. ನಿ.ಆರ್.2 ಎಂದು ಗುರುತು ಆಗಿರುವ ದಾಖಲೆಯಲ್ಲಿ ಇರುವ ಮಾಹಿತಿಯ ಪ್ರಕಾರ ಹೊಸ ದ್ವಿಚಕ್ರ ವಾಹನವನ್ನು 1 ನೇ ಎದುರುದಾರರಿಗೆ ದಿನಾಂಕ 07.01.2023 ರಂದೇ ಮಾರಾಟ ಮಾಡಲಾಗಿದೆ ಮತ್ತು ಆತನ ವಶಕ್ಕೆ ಕೊಡಲಾಗಿದೆ ಎಂದು ಕಂಡುಬರುತ್ತದೆ ಎಂದರೆ ಸರಿ.

9. ಗೇಟ್ ಪಾಸ್ ಕೊಡುವ ಮೊದಲು ಆ ಗೇಟ್ ಪಾಸ್‌ನಲ್ಲಿ ಇರುವಂತಹ ಎಲ್ಲಾ ಅಂಕಣಗಳಲ್ಲಿ(column) ತುಂಬಬೇಕಾದಂತಹ ಮಾಹಿತಿಗಳನ್ನು ನಮ್ಮ ಶೋ-ರೂಮ್‌ನವರು ಬರೆದ ನಂತರವೇ ಗೇಟ್ ಪಾಸ್ ಕೊಡಬೇಕು ಎಂದರೆ ಸರಿ.

10. ನಿ.ಆರ್.2 ಎಂದು ಗುರುತು ಆಗಿರುವ ದಾಖಲೆಯಲ್ಲಿ ಬಿಮಲ್ ಮೋಟಾರ್ಸ್ ಅವರಿಗೆ ಸಂಬಂಧಿಸಿದಂತಹ ಯಾವುದೇ ವ್ಯಕ್ತಿಗಳ ಅಥವಾ ಅಧಿಕಾರಿಗಳ ಸಹಿಗಳು ಇರುವುದಿಲ್ಲ ಎಂದರೆ ಸರಿ.

11. ಗೇಟ್ ಪಾಸ್/ಡೆಲಿವರಿ ನೋಟ್ ದಾಖಲೆಯನ್ನು ಅಂದರೆ ನಿ.ಆರ್.2 ದಾಖಲೆಯನ್ನು ನಾವು ಕೊಟ್ಟಿರುವುದಿಲ್ಲ ಮತ್ತು ಈಗ ನಮ್ಮ ಅನುಕೂಲಕ್ಕೆ ತಕ್ಕ ಹಾಗೆ ನಾವು ಸುಳ್ಳು ಸಾಕ್ಷ್ಯವನ್ನು ಪ್ರತಿಪಾದನೆ ಮಾಡುತ್ತಿದ್ದೇವೆ ಎಂದರೆ ಸುಳ್ಳು.

12. ನಿ.ಆರ್.2 ರಲ್ಲಿರುವ ವಿಳಾಸ ಬೇರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು "ಅವರು ನಮ್ಮ ಫ್ರಾಂಚೈಸಿ ಆಗಿದ್ದಾರೆ" ಎಂದು ನುಡಿದಿದ್ದಾರೆ.

13. 2 ನೇ ಎದುರುದಾರರ ಜವಾಬ್ದಾರಿಯನ್ನು ತಪ್ಪಿಸಬೇಕು ಎಂಬ ಉದ್ದೇಶದಿಂದ ನಾನು ಈ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

14. ಇಂಡಿಯನ್ ಮೋಟಾರ್ಸ್ ಅವರಿಗೂ ಹಾಗೂ ನಮ್ಮ ಬಿಮಲ್ ಮೋಟಾರ್ಸ್ ಅವರಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸುಳ್ಳು.

**<u>ಮರು ವಿಚಾರಣೆ: ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.